ನಿಗ್ರೋಧನನ್ನು ಬಹುವಾಗಿ ಹಚ್ಚಿಕೊಂಡಿರೆಂದು ಕಾಣುತ್ತದೆ' ಎಂದಳು. ಇವರ ತಂದೆ ಸುಶೀಮನಿಗೂ ತಮಗೂ ಒಂದು ಸುಂದರ ಸಂವಹನ ಸಾಧ್ಯವಾಗಲೇ ಇಲ್ಲ. ಎರಡೂ ದ್ವೇಷದ ಜ್ವಾಲಾಮುಖಿಗಳು ಯಾವಾಗಲೂ ಸಂಘರ್ಷದಲ್ಲೇ ಕಾಲ ಕಳೆದವು. ಆದರೆ, ಇವನು ಶಾಂತ ಪರಂಜ್ಯೋತಿ ಮೂರ್ತಿಯಾಗಿ ಅಶೋಕ ಸಾರ್ವಭೌಮರಿಗೆ ಕಾಣಿಸಿದ. ಹೊರಗೆ ಗೊರವಂಕಗಳ ಹಿಂಡೊಂದು 'ಗ್ವಾಂರ್ ಗ್ವಾಂರ್' ಎಂದು ವದರುತ್ತಿದ್ದವು. ಮತ್ತೆ ಅವನನ್ನು ನೋಡುತ್ತಾ ನಿಂತರು. ಅಸಾಂಧಿಮಿತ್ರೆ ಅಂತಃಪುರದಿಂದ ನೇರವಾಗಿ ಇಲ್ಲಿಗೆ ಬಂದಳು. 'ನೀವು ಹೀಗೆ ಕುಳಿತರೆ ನಿಗ್ರೋಧನಿಗೆ ಎಚ್ಚರವಾಗುತ್ತದೆ. ನಡೆಯಿರಿ ಮಲಗಿಕೊಳ್ಳೋಣ' ಎಂದು ಕೈ ಹಿಡಿದು ಕರೆದುಕೊಂಡು ಹೋದಳು, 'ನಿಮ್ಮನ್ನು ಕೊಲ್ಲಲು ಬಂದಿದ್ದೇನೆ' ಎಂಬ ವಾಕ್ಯ ಮಾತ್ರ ಆಕೆಯ ಕಿವಿಯಲ್ಲಿ ಇನ್ನೂ ರಿಂಗಣಿಸುತ್ತಿತ್ತು.

ಹಾಸಿಗೆಯ ಮೇಲೆ ಬಿದ್ದೊಡನೆಯೇ ಪ್ರಭುಗಳಿಗೆ ತಾವು ಮತ್ತು ಅಣ್ಣ ಸುಶೀಮರ ಮಧ್ಯೆ ನಡೆದ ಆ ಘನಘೋರ ಯುದ್ಧ ನೆನಪಾಯಿತು. ಆ ಯುದ್ಧದ ಅವಶ್ಯಕತೆಯೂ ಇರಲಿಲ್ಲ. ತಮಗಾಗಿ ಒಂದು ಪ್ರಾಂತ್ಯ ಕೊಟ್ಟರೂ ಸಾಕಾಗಿತ್ತು. ದೊಡ್ಡಮ್ಮನ ಕುಮ್ಮಕ್ಕಿನಿಂದ ಅನಾಹುತಗಳೇ ನಡೆದು ಹೋದವು. ತನ್ನ ಹೆಂಡತಿ ಅಸಾಂಧಿ, ಅಣ್ಣನ ಹೆಂಡತಿ ಚಂದಾ ಈ ಯುದ್ಧದ ಕಾರ್ಮೋಡವನ್ನು ತಪ್ಪಿಸಲು ಶತಪ್ರಯತ್ನ ಮಾಡಿದರು. ಆದರೆ, ಅದು ಸಾಧ್ಯವಾಗಲೇ ಇಲ್ಲ. ಕೊನೆಯ ದಿನದ ಕಾಳಗ ಬಹುಭೀಕರವಾಗಿತ್ತು.

ಮುಂಜಾನೆಯಿಂದ ಸಂಜೆಯವರೆಗೆ ಮದಗಜಗಳಂತೆ ಹೋರಾಡಿದ್ದರು. ಮಲ್ಲಯುದ್ಧ, ಕತ್ತಿವರಸೆ, ಅಶ್ವಯುದ್ಧ... ಸುಷೀಮ ಎಂತಹ ಬಲಿಷ್ಟನೆಂದರೆ ಪ್ರತೀಯುದ್ಧದಲ್ಲಿ ಅಶೋಕ ಚಕ್ರವರ್ತಿಗಿಂತಲೂ ಕೊಂಚ ಹೆಚ್ಚಿಗೆ ತನ್ನ ಪರಾಕ್ರಮ ತೋರಿಸುತ್ತಿದ್ದ. ಕೊನೆಗೆ ಆತನ ಕುದುರೆ ಎಡವಿ ನೆಲಕ್ಕೆ ಅಪ್ಪಳಿಸಿ, ಆತನನ್ನು ಭೂಮಿಗೆ ಕೆಡವಿತು. ಕಲ್ಲಟರಂತಹ ಮಂತ್ರಿಗಳು ಇದೇ ಸದಾವಕಾಶ ಹೊಡೆದು ಹಾಕಿ ಎಂದು ಅಶೋಕ ಮಹಾರಾಜರ ಕಡೆ ಸನ್ನೆ ಮಾಡಿದರು. ಆಗ ಹರಿತವಾದ ಖಡ್ಗವನ್ನು ಅವನಿಗೆ ಬೀಸಿದರು. ಅದು ರುಂಡವನ್ನು ಮುಂಡದಿಂದ ಬೇರ್ಪಡಿಸಿತು, ಆಗಿಂದಾಗಲೇ ರುಂಡ ಮತ್ತು ಮುಂಡವನ್ನು ಉರಿಯುತ್ತಿರುವ ಬೆಂಕಿಗೆ ಹಾಕಿದರು. ಸುಶೀಮ ಬೂದಿಯಾಗಿದ್ದ.

ಅಂದು ಸಂಜೆ ಅಶೋಕ ಪ್ರಭುಗಳು ಸಿಂಹಾಸನ ಏರಿದ್ದರು. ಅವರ ಅತ್ತಿಗೆ ಸುಶೀಮನ ಹೆಂಡತಿ ಸುಶೀಮನ ಚಿತಾಭಸ್ಮ ಹಿಡಿದುಕೊಂಡು ಬಂದಿದ್ದಳು, ಆಕೆಯ ಬಸಿರಿನಲ್ಲಿ ಆರು ತಿಂಗಳು ಮಗುವಿತ್ತು. 'ನೀನು ನಿನ್ನ ಸ್ವಾರ್ಥಕ್ಕಾಗಿ ನಿಮ್ಮಣ್ಣನ ಕೊಂದಿದ್ದಿ, ನಿನಗೆ ಎಂದೂ ಒಳಿತಾಗುವುದಿಲ್ಲ. ಸೂರ್ಯ- ಚಂದ್ರರು ಇರುವವರೆಗೂ ನಿನಗೆ ನರಕ ಪ್ರಾಪ್ತಿಯಾಗಲಿ' ಎಂದು ಶಾಪದೋಪಾದಿಯಲ್ಲಿ ಉಸುರಿದಳು. ಆಗ ಅವರು ಆಕೆಗೆ ಸಮಾಧಾನ ಮಾಡಲು ನೋಡಿದರು. 'ತಾಳ್ಮೆಯಿಂದ ಇರಿ ಅತ್ತಿಗೆ, ಏನೋ ನಡೆಯಬಾರದ ಘಟನೆ ನಡೆದಿದೆ, ನೀವು ಇದೇ ಅರಮನೆಯಲ್ಲಿ ನನ್ನ ಮತ್ತೊಬ್ಬ ತಾಯಿಯಾಗಿ ಇರಿ. ನನಗೆ ಮೂವರು ತಾಯಿಯರು ಇಲ್ಲಿದ್ದಾರೆ. ಆದರೆ, ನೀವೊಬ್ಬರು ಇಲ್ಲಿ ಇರಿ. ನಿಮ್ಮ ನಿರ್ಧಾರದಂತೆ, ನಿಮ್ಮ ನಿರ್ದೇಶನದಂತೆ ನಾನು ರಾಜ್ಯಭಾರ ಮಾಡುತ್ತೇನೆ' ಎಂದು ಕಾಲು ಹಿಡಿದು ಬೇಡಿಕೊಂಡರು. ಅಸಾಂಧಿ, ದೇವಿ, ಎಲ್ಲರೂ ಆಕೆಯನ್ನು ರಮಿಸಲು ಆಕೆಯ ಸುತ್ತಲು ನೆರೆದು ಸಮಾಧಾನ ಮಾಡಿದರು. ಆದರೆ, ಆಕೆಯ ಹಟ ಒಂದೇ ಆಗಿತ್ತು. ತನ್ನ ಗಂಡನನ್ನು ಕೊಂದವನ ವಿರುದ್ಧ ಸೇಡು ತೀರಿಸಿಕೊಳ್ಳುವುದು.

ಹೊರಗೆ ರಂಪರ ಮಳೆ ಸುರಿಯುತ್ತಿತ್ತು. ಗಿಡಮರಗಳು ತರಗಲೆಗಳಂತೆ ಭೂಮಿಗೆ ಬೀಳುತ್ತಲಿದ್ದವು. ಗುಡುಗು, ಸಿಡಿಲು ವಾತಾವರಣದಲ್ಲಿ ಕಠೋರ ಶಬ್ದವನ್ನು ಹುಟ್ಟು ಹಾಕಿದ್ದವು. ಆಕೆಯ ಶಾಪ. ಆ ಕಠೋರ ಗುಡುಗು ಸಿಡಿಲುಗಳಲ್ಲಿ ಒಂದಾಗಿತ್ತು. ತನ್ನ ಹೊಟ್ಟೆಯ ಮೇಲೆ ಕೈಯಿಟ್ಟು ಹೇಳಿದ್ದಳು. 'ನೀನು ಹೇಗೆ ನನ್ನ ಗಂಡ ಸುಶೀಮನನ್ನು ಕೊಲ್ಲಿಸಿದೆಯೋ ಅದೇ ರೀತಿ, ನನ್ನ ಮಗ ಮುಂದೆ ದೊಡ್ಡವನಾದ ಮೇಲೆ ನಿನ್ನ ಕೊಲ್ಲುತ್ತಾನೆ. ನಿನ್ನ ಅರಮನೆಯ ಮುಂದೆ ಅಗ್ನಿಷ್ಟಿಕೆ ಹಾಕಿ ನಿನ್ನನ್ನು ಸುಡಲಾಗುವುದು. ಅಲ್ಲಿಯವರೆಗೆ ನನ್ನ ಕೈಯಲ್ಲಿರುವ ನನ್ನ ಗಂಡನ ಚಿತಾಭಸ್ಮವನ್ನು ಹಾಗೆಯೇ ಜೋಪಾನ ಮಾಡಿ ಇಟ್ಟುಕೊಂಡಿರುತ್ತೇನೆ. ನಿಮ್ಮಿಬ್ಬರ ಚಿತಾಭಸ್ಮವನ್ನು ಒಂದೇ ದಿನ ಗಂಗೆಯಲ್ಲಿ